**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ: 651/2019**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ,
ನಂಜನಗೂಡು.

ವಿರುದ್ಧ

**ಆರೋಪಿಗಳು** : ಶ್ರೀ.ವಿಶ್ವನಾಥ ಮತ್ತು ಇತರರು

:: **ದೋಷಾರೋಪಣೆ** ::

**ಶ್ರೀ ಸತೀಶ ಕೆ.ಜಿ., ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ನಂಜನಗೂಡು ಆದ ನಾನು ಆರೋಪಿತರಾದ-

1) ಶ್ರೀ.ವಿಶ್ವನಾಥ ಬಿನ್ ಕುಳ್ಳಯ್ಯ
ವಯಸ್ಸು ಸುಮಾರು 42 ವರ್ಷ,

2) ಶ್ರೀ.ಕೃಷ್ಣ ಬಿನ್ ರಂಗಸ್ವಾಮಿ
ವಯಸ್ಸು ಸುಮಾರು 21 ವರ್ಷ,

3) ಶ್ರೀ.ನಂದೀಶ ಬಿನ್ ಮಹದೇವ
ವಯಸ್ಸು ಸುಮಾರು 30 ವರ್ಷ,

4) ಶ್ರೀ.ಮಹೇಶ ಬಿನ್ ಸಾಂಬಯ್ಯ
ವಯಸ್ಸು ಸುಮಾರು 38 ವರ್ಷ,

5) ಶ್ರೀ.ಚೆನ್ನಸ್ವಾಮಿ ಉಃ ರಂಗಸ್ವಾಮಿ ಬಿನ್ ಸಣ್ಣಯ್ಯ
ವಯಸ್ಸು ಸುಮಾರು 58 ವರ್ಷ,

6) ಶ್ರೀ.ಬಾಲು ಬಿನ್ ರಂಗಸ್ವಾಮಿ
ವಯಸ್ಸು ಸುಮಾರು 32 ವರ್ಷ,

7) ಶ್ರೀ.ಸುನೀಲ್ ಬಿನ್ ಮಹದೇವ
ವಯಸ್ಸು ಸುಮಾರು 32 ವರ್ಷ,

9) ಶ್ರೀ.ಗಿರೀಶ ಬಿನ್ ಸಾಂಬಯ್ಯ
ವಯಸ್ಸು ಸುಮಾರು 39 ವರ್ಷ,

10) ಶ್ರೀ.ರಾಜು ಬಿನ್ ಸಣ್ಣಯ್ಯ
ವಯಸ್ಸು ಸುಮಾರು 56 ವರ್ಷ,

11) ಶ್ರೀ.ಸುರೇಶ ಬಿನ್ ರಾಜು
ವಯಸ್ಸು ಸುಮಾರು 33 ವರ್ಷ,

12) ಶ್ರೀ.ರಮೇಶ ಬಿನ್ ಮಹದೇವ
ವಯಸ್ಸು ಸುಮಾರು 30 ವರ್ಷ,

13) ಶ್ರೀ.ಗೋಪಿ ಬಿನ್ ಮಹದೇವಸ್ವಾಮಿ
ವಯಸ್ಸು ಸುಮಾರು 32 ವರ್ಷ,

14) ಶ್ರೀ.ಶಿವರಾಜು ಬಿನ್ ಮಹದೇವ
**ಮೃತಪಟ್ಟಿರುತ್ತಾರೆ (Abated)**

15) ಶ್ರೀ.ಶಿವರಾಜು ಬಿನ್ ಚಿಕ್ಕಕೂಸು
ವಯಸ್ಸು ಸುಮಾರು 32 ವರ್ಷ,

16) ಶ್ರೀ.ಕಿಶೋರ ಬಿನ್ ಮಹದೇವಸ್ವಾಮಿ
**ಮೃತಪಟ್ಟಿರುತ್ತಾರೆ (Abated)**

17) ಶ್ರೀ.ರಾಜಣ್ಣ ಬಿನ್ ಮಹದೇವ
ವಯಸ್ಸು ಸುಮಾರು 35 ವರ್ಷ,

18) ಶ್ರೀ.ಮಹದೇವಸ್ವಾಮಿ ಬಿನ್ ಕುಂಡಮರಯ್ಯ
ವಯಸ್ಸು ಸುಮಾರು 57 ವರ್ಷ,

19) ಶ್ರೀ.ಬಸವರಾಜು ಬಿನ್ ಮಹದೇವಯ್ಯ
ವಯಸ್ಸು ಸುಮಾರು 54 ವರ್ಷ,

20) ಶ್ರೀ.ಚಿಕ್ಕೇಜಮಾನ ಸಿದ್ದರಾಜು ಬಿನ್ ಲೇಟ್ ಸಣ್ಣಯ್ಯ
ವಯಸ್ಸು ಸುಮಾರು 45 ವರ್ಷ,

21) ಶ್ರೀ.ಶಂಭಯ್ಯ ಬಿನ್ ಬಸವಯ್ಯ
ವಯಸ್ಸು ಸುಮಾರು 68 ವರ್ಷ,

ನಂಜನಗೂಡು ತಾಲ್ಲೂಕಿನ ಇಮ್ಮಾವುಹುಂಡಿ ಗ್ರಾಮದ ನಿವಾಸಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ಮೊದಲನೆಯದಾಗಿ ದಿನಾಂಕ 01.01.2018 ರಂದು ಸಂಜೆ 05.00 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಇಮ್ಮಾವು ಹುಂಡಿ ಗ್ರಾಮದ ಚಾಸಾ-1-ಶ್ರೀಮತಿ.ಮಹದೇವಮ್ಮರವರ ವಾಸದ ಮನೆಯಲ್ಲಿ ಚಾಸಾ-1

ರವರು ಚಾಸಾ–4–ಶ್ರೀ.ಮಹದೇವಸ್ವಾಮಿರವರ ಹತ್ತಿರ ಪೂಜೆ ಮಾಡಿಸುತ್ತಿದ್ದಾಗ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ಮಾಡಲು ಅಕ್ರಮ ಕೂಟ ಸೇರಿಕೊಂಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ಮಾಡಲು ಅಕ್ರಮ ಗುಂಪನ್ನು ಕಟ್ಟಿಕೊಂಡು ದೊಂಬಿಯನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ಮಾಡಲು ಅಕ್ರಮ ಗುಂಪನ್ನು ಕಟ್ಟಿಕೊಂಡು ಕೈಗಳಲ್ಲಿ ಮಾರಕಾಯುಧವಾದ ದೊಣ್ಣೆಯನ್ನು ಹಿಡಿದುಕೊಂಡು ದೊಂಬಿಯನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ 149 ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ತೆಗೆದು ಚಾಸಾ–1 ರವರ ಮನೆಗೆ ಗೃಹಾತಿಕ್ರಮಣ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 2, 12 ಮತ್ತು 13 ನೇ ಆರೋಪಿಗಳಾದ ನೀವು ಪೂಜೆ ಮಾಡುತ್ತಿದ್ದ ಚಾಸಾ–4 ರವರನ್ನು ಉದ್ದೇಶಿಸಿ "ಬೋಳಿ ಮಗನೆ, ಸೂಳೆ ಮಗನೆ ನೀನು ಯಾವ ಪೂಜೆ ಮಾಡುವುದು" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಚಾಸಾ–2 ರವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಕುಪಿತರಾಗಿ ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಯಾವುದೇ ಅಪರಾಧವನ್ನು ಮಾಡಬೇಕೆಂಬ

ಉದ್ದೇಶದಿಂದ ಅವರನ್ನು ಅವಮಾನಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಆರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 1, 4, 6, 7, 9, 10, 15, 17 ಮತ್ತು 18 ನೇ ಆರೋಪಿಗಳಾದ ನೀವು ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡು ಒಂದು ಎಲ್ಲೆಯಿಂದಾಚೆಗೆ ಮುಂದೆ ಹೋಗದಂತೆ ಅಕ್ರಮವಾಗಿ ಪ್ರತಿಬಂಧಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಏಳನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 12 ನೇ ಆರೋಪಿಯಾದ ನೀವು ಮಾರಕಾಯುಧವಾದ ದೊಣ್ಣೆಯಿಂದ ಚಾಸಾ-2 ರವರ ಎಡಪಾದ ಮತ್ತು ಹೊಟ್ಟೆಗೆ ಸ್ವ-ಇಚ್ಛೆಯಿಂದ ಹಲ್ಲೆ ಮಾಡಿದ್ದಲ್ಲದೆ, 13 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-2 ರವರ ಎಡಕೈ ಮತ್ತು ಎದೆಗೆ ಹೊಡೆದಿದ್ದು ಮತ್ತು 2 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-2 ರವರ ಎರಡು ಮಂಡಿಗಳಿಗೆ ಸ್ವ-ಇಚ್ಛೆಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎಂಟನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 3, 5 ಮತ್ತು 11 ನೇ ಆರೋಪಿಗಳಾದ ನೀವು ಕೈಗಳಿಂದ ಚಾಸಾ-2 ರವರ ಮೈ-ಕೈಗೆ ಸ್ವ-ಇಚ್ಛೆಯಿಂದ ಹಲ್ಲೆ ಮಾಡಿ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಒಂಭತ್ತನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 19, 20 ಮತ್ತು 21 ನೇ ಆರೋಪಿಗಳಾದ ನೀವು ಜಗಳ ಬಿಡಿಸಲು ಬಂದ

ಚಾಸಾ–1 ರವರನ್ನು ಹಿಡಿದು ಎಳೆದಾಡಿ ರವಿಕೆಯನ್ನು ಹರಿದು ಹಾಕಿ ಆಕೆಗೆ ಮಾನಭಂಗ ಮಾಡುವ ಉದ್ದೇಶದಿಂದ ಚಾಸಾ–1 ರವರ ಮೇಲೆ ಅಪರಾಧಿಕ ಬಲ ಪ್ರಯೋಗ ಮಾಡಿದ್ದು ಹಾಗು 2, 14 ಮತ್ತು 16 ನೇ ಆರೋಪಿಗಳಾದ ನೀವು ಚಾಸಾ–3 ರವರನ್ನು ಹಿಡಿದು ಎಳೆದಾಡಿ ಆಕೆಗೆ ಮಾನಭಂಗ ಮಾಡುವ ಉದ್ದೇಶದಿಂದ ಚಾಸಾ–1 ರವರ ಮೇಲೆ ಅಪರಾಧಿಕ ಬಲ ಪ್ರಯೋಗ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಹತ್ತನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 1, 4, 6, 7, 9, 10, 15, 17 ಮತ್ತು 18 ನೇ ಆರೋಪಿಗಳಾದ ನೀವು ಚಾಸಾ–1 ರಿಂದ 4 ರವರನ್ನು ಮನೆಯಲ್ಲಿ ಕೂಡಿಹಾಕಿ ಬೀಗ ಹಾಕಿಕೊಂಡು ಅಕ್ರಮವಾಗಿ ಬಂಧಿಸಿಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 342 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆ:1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

1 ರಿಂದ 7, 9 ರಿಂದ 13, 15, 17 ರಿಂದ 21 ನೇ ಆರೋಪಿಗಳ ಉತ್ತರಃ

ಪ್ರಶ್ನೆ:2– ಸದರಿ ಆರೋಪಣೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ರಿಂದ 7, 9 ರಿಂದ 13, 15, 17 ರಿಂದ 21 ನೇ ಆರೋಪಿಗಳ ಉತ್ತರಃ

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 16.05.2025.

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.